ಅನುಬಂಧ-I

ಹಟ್ಟಿ ಚಿನ್ನದ ಗಣಿಯಲ್ಲಿ ವಜಾಗೊಂಡ ಕಾರ್ಮಿಕರನ್ನು ಸೇವೆಗೆ ಪುನಃ ತೆಗೆದುಕೊಳ್ಳುವುದು.

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ.: 346(413)

ಸದಸ್ಯರ ಹೆಸರು: ಶ್ರೀ ಅಮರೇಗೌಡ ಪಾಟೀಲ್ ಬಯ್ಯಾಪುರ(ಲಿಂಗಸೂಗೂರು)

ಉತ್ತರಿಸುವವರು : ಶ್ರೀ ವಿ.ಮುನಿಯಪ್ಪ (ಗಣಿ ಮತ್ತು ಭೂವಿಜ್ಞಾನ ಹಾಗೂ ಅಂತರ್ಜಲ ಸಚಿವರು)

ಪ್ರಶ್ನೆ

ಅ. ಲಿಂಗಸಗೂರು ತಾಲ್ಲೂಕಿನ ಹಟ್ಟಿ ಚಿನ್ನದ ಗಣಿ ನಿಯಮಿತ, ಹಟ್ಟಿಯಲ್ಲಿ ಮೊದಲು ಸೇವೆಯಿಂದ ವಜಾಗೊಂಡ 12 ಕಾರ್ಮಿಕರನ್ನು ಸೇವೆಗೆ ತೆಗೆದುಕೊಂಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇಃ

ಆ. ವಜಾಗೊಂಡ ಕಾರ್ಮಿಕರನ್ನು ಸೇವೆಗೆ ಪುನಃ ತೆಗೆದುಕೊಂಡಿದ್ದಲ್ಲಿ, ಇದೇ ರೀತಿ ಈ ಮೊದಲು ವಜಾಗೊಂಡ 52 ಕಾರ್ಮಿಕರನ್ನು ಸೇವೆಗೆ ತೆಗೆದುಕೊಳ್ಳಲು ವಿಲಂಬ ಮಾಡಲು ಕಾರಣಗಳೇನು?

ಇ. ಕಾರ್ಮಿಕರನ್ನು ಯಾವ ಆಧಾರದ ಮೇಲೆ ಸೇವೆಗೆ ಪುನಃ ತೆಗೆದುಕೊಳ್ಳಲಾಗಿದೆ, ತೆಗೆದುಕೊಳ್ಳಲಾಗುವುದು?

ಉತ್ತರ

ಅ. ಹೌದು. ಸರ್ಕಾರದ ಗಮನಕ್ಕೆ ಬಂದಿದೆ.

ಆ. ಈ 12 ಜನ ವಜಾಗೊಂಡ ಕಾರ್ಮಿಕರ ವಿಷಯವು ಇತ್ತೀಚಿನ ವಿಷಯವಾಗಿದೆ. ಬಾಕಿ ಕಾರ್ಮಿಕರ ವಿಷಯ ಬಹಳ ಹಳೆಯದಾಗಿದ್ದು, ಪುನರ್ ಪರಿಶೀಲಿಸುವುದು ಅಗತ್ಯವಿರುದಿಲ್ಲವೆಂದು ಅಭಿಪ್ರಾಯಪಡಲಾಗಿದೆ.

ಇ. ಈ ಕಾರ್ಮಿಕರನ್ನು ಅನುಕಂಪದ ಆಧಾರದ ಮೇಲೆ ಪುನರ್ ನೇಮಕಾತಿ ಮಾಡಲಾಗಿದೆ.